ಅಸಲು ದಾವೆ ಸಂಖ್ಯೆ - 257/2016
ಪಿಡಬ್ಲ್ಯೂ - 02

ದಿನಾಂಕಃ 19.01.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ. ವಿ ಬಿ ಟಿ ವಕೀಲರಿಂದ**

1. ದಾವಾ ಆಸ್ತಿಯು ಮಳೆಪ್ಪರವರ ಮಕ್ಕಳ ಹೆಸರಿನಲ್ಲಿದೆ. ಮಳೆಪ್ಪರವರ ಮಕ್ಕಳ ಹೆಸರಿನಲ್ಲಿ 2 ಎಕರೆ 12 ಗುಂಟೆ ಜಮೀನು ಇದೆ. ದಾವಾ ಆಸ್ತಿಯ ಸರ್ವೆ ನಂ.57/6 ಎ. ಅದು ಒಟ್ಟು ಕ್ಷೇತ್ರ 04 ಎಕರೆ 25 ಗುಂಟೆ ಇದೆ. ಸದರಿ ಒಟ್ಟು ಕ್ಷೇತ್ರದ ಪೈಕಿ ಮೃತ ವಾದಿ ಶೇಖಪ್ಪರವರ ಹೆಸರಿನಲ್ಲಿ 2 ಎಕರೆ 12 ಗುಂಟೆ ಜಮೀನು ಖಾತೆ ಇದ್ದು ಉಳಿಕೆ ಜಮೀನು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುವುದಿಲ್ಲ. ಸಾಕ್ಷಿ ಮುಂದುವರೆದು ಉಳಿಕೆ ಒಟ್ಟು ಕ್ಷೇತ್ರದ ಪೈಕಿ 2 ಎಕರೆ 13 ಗುಂಟೆ ನಾಗಪ್ಪ ಮಳೆಪ್ಪರವರ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-1 ರ ಪಹಣಿ ಪತ್ರಿಕೆಯನ್ನು ತೋರಿಸಿದಾಗ ಅದರಲ್ಲಿ ಸರ್ವೆ ನಂ.57/6 ಎ ಒಟ್ಟು ಕ್ಷೇತ್ರ 04 ಎಕರೆ 25 ಗುಂಟೆ ಪೈಕಿ 02 ಎಕರೆ 12 ಗುಂಟೆ ಜಮೀನು ಪ್ರತಿವಾದಿಗಳ ಜಂಟಿ ಹೆಸರಿನಲ್ಲಿ ಮತ್ತು ಉಳಿಕೆ ಕ್ಷೇತ್ರ 2 ಎಕರೆ 13 ಗುಂಟೆ ನಾಗಪ್ಪ ಮಳೆಪ್ಪರವರ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿರುವ ನಮೂದುಗಳು ಎಷ್ಟು ವರ್ಷಗಳಿಂದ ಮುಂದುವರೆದಿರುತ್ತವೆ ಎಂದು ನನಗೆ ಗೊತ್ತಿಲ್ಲ.

2. ಸದರಿ 02 ಎಕರೆ 12 ಗುಂಟೆ ಕ್ಷೇತ್ರಕ್ಕೆ ಪ್ರತಿವಾದಿಗಳ ಜಂಟಿ ಹೆಸರು ಮೋಸದಿಂದ ಕಂದಾಯ ಅಧಿಕಾರಿಗಳೊಂದಿಗೆ ಮೀಲಾಪಿಯಾಗಿ ಸೃಷ್ಟಿಸಿಕೊಂಡಿರುತ್ತಾರೆ. ಸದರಿ ಸೃಷ್ಟಿಯನ್ನು ಯಾವ ವರ್ಷದಲ್ಲಿ ಮಾಡಿಕೊಂಡಿರುತ್ತಾರೆ ಎಂದು ಗೊತ್ತಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ವಾದಿಯರ ತಂದೆ ಮತ್ತು ಪ್ರತಿವಾದಿಯರ ತಂದೆ ನಡುವೆ ಭೂ ನ್ಯಾಯ ಮಂಡಳಿ ಸವಣೂರಿನಲ್ಲಿ ಯಾವುದೇ ಪ್ರಕರಣಗಳು ಇರಲಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಮೃತ ವಾದಿಯ ತಂದೆಯ ಹೆಸರು ಕಂದಾಯ ದಾಖಲೆಗಳಲ್ಲಿ ಸುಮಾರು 20-22 ವರ್ಷಗಳಿಂದ ಕಡಿಮೆ ಆಗಿರಬಹುದು. ಮೃತ ವಾದಿಯಾಗಲಿ ಅಥವಾ ಆತನ ತಂದೆಯಾಗಲೀ ಸದರಿ ಕಂದಾಯ ದಾಖಲೆಗಳಲ್ಲಿ ಪ್ರತಿವಾದಿಯರು ದಾವಾ ಆಸ್ತಿಗೆ ಸಂಬಂಧಿಸಿದಂತೆ ತಮ್ಮ ಹೆಸರನ್ನು ಖೊಟ್ಟಿ ನಮೂದುಗಳನ್ನು ಮಾಡಿಕೊಂಡ ಬಗ್ಗೆ ಪ್ರಕರಣಗಳನ್ನು ದಾಖಲಿಸಿರುವುದಿಲ್ಲ. ಮೃತ ವಾದಿಯು ನನಗೆ ದೂರದ ಸಂಬಂಧಿ. ಪ್ರತಿವಾದಿಯರಿಗೆ ಸಂಗನಗೌಡ ತಂದೆ ಬಸನಗೌಡ ಮಾಜೀಗೌಡ್ರ ಎಂಬ ಹಿರಿಯರು ಇದ್ದರು ಎಂದರೆ ಸರಿ. ಮೃತ ವಾದಿಯರ ಹಿರಿಯರ ನಡುವೆ ಮತ್ತು ಪ್ರತಿವಾದಿಯರ ಹಿರಿಯರ ನಡುವೆ ದಾವಾ ಜಮೀನಿನ ಸರ್ವೆ ನಂ.57 ರ ಬಗ್ಗೆ 1976 ರಲ್ಲಿ ಭೂ ನ್ಯಾಯಮಂಡಳಿಯಲ್ಲಿ

ವಿವಾದಗಳು ಇದ್ದವು ಎಂದರೆ ಸರಿಯಲ್ಲ. ದಾವಾ ಜಮೀನಿನ ಸರ್ವೆ ನಂ.57/6ಎ/2 ವಿಸ್ತೀರ್ಣ 02 ಎಕರೆ 12 ಗುಂಟೆಗೆ ಸಂಬಂಧಿಸಿದಂತೆ ದಿನಾಂಕಃ 13.07.1976 ರಲ್ಲಿ ಆದ ಭೂ ನ್ಯಾಯ ಮಂಡಳಿಯ ಆದೇಶದಂತೆ ಸದರಿ ಜಮೀನು ಪ್ರತಿವಾದಿಯರ ಹಿರಿಯರಾದ ಸಂಗನಗೌಡ ಮಾಜೀಗೌಡ್ರ ರವರಿಗೆ ಮಂಜೂರು ಆಗಿತ್ತು ಎಂದರೆ ಸಾಕ್ಷಿಯು ಖೊಟ್ಟಿ ನಮೂದು ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಮಂಜೂರಾತಿಯ ದಿನದಿಂದಲೂ ಪ್ರತಿವಾದಿಯರ ತಂದೆ ಸಂಗನಗೌಡ ಮಾಜೀಗೌಡ್ರ ರವರು ಮರಣ ಹೊಂದುವವರೆಗೂ ದಾವಾ ಆಸ್ತಿಯ ಕಬ್ಜೆ ಮತ್ತು ವಹಿವಾಟಿಯಲ್ಲಿ ಇದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಇಂದಿಗೂ ಸಹ ವಾದಿಯರೇ ವಹಿವಾಟಿನಲ್ಲಿ ಇರುತ್ತಾರೆ ಎಂದು ನುಡಿಯುತ್ತಾರೆ. ಸಂಗನಗೌಡ ಮಾಜೀಗೌಡ್ರ ರವರು ಮರಣ ಹೊಂದಿದ ನಂತರ ಹಾಗೂ ಇಂದಿಗೂ ಸಹ ಸುಮಾರು 20-25 ವರ್ಷಗಳ ಹಿಂದಿನಿಂದಲೂ ಪ್ರತಿವಾದಿಗಳೇ ದಾವಾ ಆಸ್ತಿಯ ಕಬ್ಜೆ ಮತ್ತು ವಹಿವಾಟಿಯಲ್ಲಿರುತ್ತಾರೆ ಎಂದರೆ ಸರಿಯಲ್ಲ. ಭೂ ನ್ಯಾಯ ಮಂಡಳಿಯು ದಾವಾ ಆಸ್ತಿಯನ್ನು ಪ್ರತಿವಾದಿಯರ ತಂದೆಯಾದ ಸಂಗನಗೌಡ ಮಾಜೀಗೌಡ್ರರವರಿಗೆ ಮಂಜೂರು ಮಾಡಿದ ನಂತರ ಫಾರ್ಮ ನಂ.10 ರಂತೆ ಪಟ್ಟವನ್ನು ಸಹ ನೀಡಿರುತ್ತಾರೆ ಎಂದರೆ ಸಾಕ್ಷಿಯು ಖೊಟ್ಟಿಯನ್ನು ಸೃಷ್ಟಿಸಿರುತ್ತಾರೆ ಎಂದು ನುಡಿಯುತ್ತಾರೆ.

3. ದಾವಾ ಆಸ್ತಿಯ ಮೌಲ್ಯ 2015-16 ನೇ ಇಸ್ವಿಯಲ್ಲಿ ಪ್ರತಿ ಎಕರೆಗೆ 5-6 ಲಕ್ಷ ಇತ್ತು. ನಾನು ಸುಳ್ಳು ಆಧರಿಸಿರುವಂತೆ ದಾವಾ ಆಸ್ತಿಗೆ ಪ್ರತಿವಾದಿಯರ ಹಿರಿಯರು ನಂತರ ಪ್ರತಿವಾದಿಯರು ಕಂದಾಯ ದಾಖಲಾತಿಗಳಲ್ಲಿ ಖೊಟ್ಟಿ ನಮೂದುಗಳನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರ ಹಿರಿಯರು ಮೊದಲಿಗೆ ದಾವಾ ಶೆಡ್ಯೂಲ್ ಆಸ್ತಿಯನ್ನು ರೈತನಾತೆಯಿಂದ ಸಾಗುವಳಿ ಮಾಡುತ್ತಾ ಬಂದಿದ್ದು ನಂತರದಲ್ಲಿ ಅದನ್ನು ಪ್ರತಿವಾದಿಯರ ತಂದೆಗೆ 1976 ರಲ್ಲಿ ಮಂಜೂರು ಮಾಡಿದ್ದು, ಸದರಿ ಮಂಜೂರಾತಿ ಆಧಾರದಂತೆ ಪ್ರತಿವಾದಿಯರ ಹಿರಿಯರು ಮತ್ತು ಅವರ ನಂತರ ಪ್ರತಿವಾದಿಗಳು ದಾವಾ ಶೆಡ್ಯೂಲ್ ಆಸ್ತಿಯ ಕಬ್ಜೆ ಮತ್ತು ವಹಿವಾಟನ್ನು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಮೃತ ವಾದಿಯ ಹಿರಿಯರಾಗಲೀ, ಮೃತ ವಾದಿಯಾಗಲೀ ಮತ್ತು ಆತನ ವಾರಸುದಾರರಾಗಲೀ ಎಂದಿಗೂ ಮತ್ತು ಇಂದಿಗೂ ವಹಿವಾಟು ಮಾಡುತ್ತಿಲ್ಲ ಎಂದರೆ ಸರಿಯಲ್ಲ. ನಾನು ವಾದಿಯರಿಗೆ ದೂರದ ಸಂಬಂಧಿ ಇರುವ ಕಾರಣಕ್ಕೆ ಅವರಿಗೆ ಅನುಕೂಲ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.